**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**
**ಸಿ.ಸಿ. ನಂ. 786/2024**

**ಪಿ ಡಬ್ಲೂಃ 1**

**ಸಾಕ್ಷಿಗೆ ದಿನಾಂಕಃ19.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

7. ನಾನು 75 ಸಾವಿರ ರೂಪಾಯಿಯನ್ನು ಆರೋಪಿಯ ಯಾವ ಮೊಬೈಲ ಸಂಖ್ಯೆಗೆ ಜಮಾ ಮಾಡಿದ್ದೆನೆ ಎಂದು ಹೇಳಲಾಗುವುದಿಲ್ಲ. ಆ ಬಗ್ಗೆ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ಆರೋಪಿಯ ಜೊತೆ ವ್ಯವಹಾರ ಮಾಡಿದಾಗ ನನ್ನ ವಾರ್ಷಿಕ ಆದಾಯ 6-7 ಲಕ್ಷ ಇತ್ತು ನಾನು ತೆರಿಗೆ ಪಾವತಿ ಮಾಡುತ್ತೇನೆ. ನಾನು ಆರೋಪಿಗೆ 15 ಲಕ್ಷ ಕೊಟ್ಟ ಬಗ್ಗೆ ತೆರಿಗೆ ಇಲಾಖೆಗೆ ತಿಳಿಸಿಲ್ಲ. ನಾನು ಅಂಚೆ ಇಲಾಖೆಯೊಂದಿಗೆ ಶಾಮೀಲ್ ಆಗಿ ನನಗೆ ಅನುಕೂಲವಾಗುವ ರೀತಿ ನಾನು ಆರೋಪಿಗೆ ಕಳುಹಿಸಿದ ನೋಟಿಸ್ ಗೆ ಹಿಂಬರಹವನ್ನು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತೆರಿಗೆ ವರದಿಯನ್ನು ಸಲ್ಲಿಸಲು ತೊಂದರೆ ಇಲ್ಲ.

8. ನಿವೃತಿ ಹಣವು ನನ್ನ ಎಸ್ ಬಿ ಐ ಖಾತೆಗೆ ವರ್ಗಾವಣೆ ಆಗಿತ್ತು. 15 ಲಕ್ಷ ಕೊಡಲು ನನಗೆ 4 ತಿಂಗಳು ಹಿಂದಿನಿಂದಲೂ ಆರೋಪಿ ಕೇಳುತ್ತಿದ್ದರು. ಆರೋಪಿ ನನಗೆ 3,66,000 ರೂ ಹಣ ಕೊಡಲು ಬಾಕಿ ಇರುತ್ತದೆ. ಆರೋಪಿ ಈ ಪ್ರಕರಣ ಸಲ್ಲಿಸಿದ ನಂತರ ಹಣ ಪಾವತಿ ಮಾಡಿರುತ್ತಾರೆ. ನಿಪಿಃ 1 ರಲ್ಲಿ ಮೊತ್ತ ಬರೆದ ಬರವಣಿಗೆ ಹಾಗೂ ನನ್ನ ಹೆಸರು ಬರೆದ ಬರವಣಿಗೆ ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ನಿಪಿಃ 1 ರಲ್ಲಿ ಇರುವ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ದಿಃ 05.04.2024 ರಂದು 35 ಸಾವಿರ ಮತ್ತು 50 ಸಾವಿರ

ಹಣ  ಆರೋಪಿ ಖಾತೆಯಿಂದ ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ಭದ್ರತೆಗಾಗಿ ಆರೋಪಿ ನನಗೆ ಖಾಲಿ ಚೆಕ್ಕು ನೀಡಿದ್ದು ನಾನು ಅದನ್ನು ದುರುಪಯೋಗ ಪಡಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ, ಆರೋಪಿಯಿಂದ ಹೆಚ್ಚಿನ ಹಣ ಪಡೆಯಲು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**